## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 142 (1433)

ಸದಸ್ಯರ ಹೆಸರು : ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು)

ಉತ್ತರಿಸಬೇಕಾದ ದಿನಾಂಕ : 16.03.2026

ಉತ್ತರಿಸುವ ಸಚಿವರು : ಉನ್ನತ ಶಿಕ್ಷಣ ಸಚಿವರು.

| ಕ್ರಮ. ಸಂಖ್ಯೆ. | ಪ್ರಶ್ನೆ | ಉತ್ತರ |
|---|---|---|
| (ಅ) | ಉನ್ನತ ಶಿಕ್ಷಣ ಇಲಾಖೆಯು ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯ ಯೋಜನೆಯನ್ನು (UUCMS) ರಾಜ್ಯದಲ್ಲಿ ಜಾರಿಗೆ ತಂದಿರುತ್ತದೆಯೇ; ತಂದಿದ್ದಲ್ಲಿ, ಎಂದಿನಿಂದ ಯೋಜನೆ ಜಾರಿಗೆ ತರಲಾಗಿರುತ್ತದೆ; ಈ ಸಂಬಂಧ ಕೈಗೊಂಡಿರುವ ಕ್ರಮಗಳೇನು; | ಹೌದು.<br><br>ಆಗಸ್ಟ್ 2021 ರಿಂದ UUCMS ತಂತ್ರಾಂಶವನ್ನು ರಾಜ್ಯದ ಸಾರ್ವಜನಿಕ ವಿಶ್ವವಿದ್ಯಾಲಯಗಳು ಹಾಗೂ ಸಂಯೋಜಿತ ಮತ್ತು ಸ್ವಾಯತ್ತ ಕಾಲೇಜುಗಳ ಬಳಕೆಗೆ ಲೋಕಾರ್ಪಣೆ ಮಾಡಲಾಗಿದೆ.<br><br>UUCMS ತಂತ್ರಾಂಶದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಹಂತದಲ್ಲಿ ಇ-ಆಡಳಿತ ಘಟಕ ರಚಿಸಿ ಸಮನ್ವಯತೆ ಸಾಧಿಸಲು ನಿಯಮಿತವಾಗಿ ಸಭೆ, ತರಬೇತಿಗಳನ್ನು ನಡೆಸಲಾಗುತ್ತಿದೆ. |
| (ಅ) | ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಕ್ರಮಗಳನ್ನು ಒಂದೇ ವ್ಯವಸ್ಥೆಯೊಳಗೆ ನಿರ್ವಹಿಸಲು ಅವಕಾಶ ನೀಡುತ್ತದೆಯೇ: ಇದರಿಂದ ರಾಜ್ಯದಲ್ಲಿ ಉನ್ನತ ಶಿಕ್ಷಣದ ದಾಖಲಾತಿ, ಕಲಿಕೆ, ಪರೀಕ್ಷೆ, ಮೌಲ್ಯಮಾಪನ, ಸಂಶೋಧನೆ ಹಾಗೂ ಇತರ ಪಠ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಏಕ ವ್ಯವಸ್ಥೆಗೆ ಅವಕಾಶ ಇರುತ್ತದೆಯೇ; (ಇದ್ದಲ್ಲಿ, ವಿವರಗಳನ್ನು ಒದಗಿಸುವುದು); | ಹೌದು.<br><br>UUCMS ತಂತ್ರಾಂಶದ ಬಳಕೆಯಿಂದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾತಿ, ಕಲಿಕೆ, ಪರೀಕ್ಷೆ, ಮೌಲ್ಯಮಾಪನ, ಸಂಶೋಧನೆ ಹಾಗೂ ಇತರ ಪಠ್ಯಕ್ರಮಗಳನ್ನು (CBCS, NEP, SEP) ಏಕ ವ್ಯವಸ್ಥೆಯಲ್ಲಿ ನಿರ್ವಹಿಸಲು ಅವಕಾಶ ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ UUCMS ತಂತ್ರಾಂಶದಲ್ಲಿ ಸೂಕ್ತ ಮಾಡ್ಯೂಲ್‌ಗಳನ್ನು ನೀಡಲಾಗಿದೆ, Affiliation, Admission, Academics and Class Monitoring, Examination, Research and Development, Asset Management, Finance, Student Support, ಈ ಮಾಡ್ಯೂಲ್‌ಗಳ ಸಹಾಯದಿಂದ ಸರ್ಕಾರದ Common Calender of Event ಅನ್ವಯ ಸದರಿ ಚಟುವಟಿಕೆಗಳನ್ನು ನಿಗದಿತ ಅವದಿಯೊಳಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗಿದೆ. |

| | | |
|---|---|---|
| (ಇ) | UUCMS ಯೋಜನೆಯಡಿಯಲ್ಲಿ ಎಷ್ಟು ಸಭೆಗಳನ್ನು ನಡೆಸಲಾಗಿರುತ್ತದೆ. ಕೈಗೊಂಡಿರುವ ಕ್ರಮಗಳು ಮತ್ತು ಇದರ ಪ್ರಯೋಜನಗಳು ಎಷ್ಟು; (ವಿವರವನ್ನು ಒದಗಿಸುವುದು); | UUCMS ಯೋಜನೆಯ ಪೂರ್ವಸಿದ್ಧತೆಗಾಗಿ Functional Requirement of Specification (FRS) ಹಾಗೂ System Requirement Specification (SRS) ತಯಾರಿಕೆಗಾಗಿ ರಚಿಸಲಾದ 10 ಉಪಸಮಿತಿಗಳ ಮತ್ತು ಉಪಸಮಿತಿ ಹಾಗೂ Stakeholders ಜೊತೆಗೆ 80 ಕ್ಕೂ ಹೆಚ್ಚು ಸಭೆಗಳನ್ನು ನಡೆಸಲಾಗಿದೆ.<br><br>UUCMS ತಂತ್ರಾಂಶದ Technical Specification and Development .ಗೆ ಸಂಬಂಧಿಸಿದಂತೆ ವಾರ್ಷಿಕ ಸರಾಸರಿ 15 ಕ್ಕೂ ಹೆಚ್ಚು Technical ಸಭೆಗಳನ್ನು ನಡೆಸಲಾಗಿದೆ.<br><br>UUCMS ತಂತ್ರಾಂಶದ ಬಳಕೆಯ ಬಗ್ಗೆ ವಿಶ್ವವಿದ್ಯಾಲಯಗಳಿಗೆ ವಾರ್ಷಿಕ ಸರಾಸರಿ 18 ಕ್ಕೂ ಹೆಚ್ಚು Offline/Online ತರಬೇತಿ ಸಭೆಗಳನ್ನು ನಡೆಸಲಾಗಿದೆ.<br><br>UUCMS ತಂತ್ರಾಂಶದ ಬಳಕೆಯಲ್ಲಿ ಉದ್ಭವವಾಗುವ Issue ಗಳನ್ನು ಪರಿಹರಿಸಲು ಸಂಬಂಧಿಸಿದಂತೆ Central for Smart Governance ರವರೊಂದಿಗೆ ಪ್ರತಿ ವಾರ Synchup ಸಭೆಗಳನ್ನು, ಪ್ರತಿ ತಿಂಗಳು ವಿಶ್ವವಿದ್ಯಾಲಯಗಳೊಂದಿಗೆ ನಿಯಮಿತವಾಗಿ ಸಭೆಗಳನ್ನು ನಡೆಸಲಾಗಿದೆ. |
| (ಈ) | ಈ ಯೋಜನೆ ಅಡಿಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ಎಷ್ಟು ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ವಿದ್ಯಾರ್ಥಿಗಳು ಒಳಪಡುತ್ತಾರೆ; ಖಾಸಗಿ ವಿಶ್ವವಿದ್ಯಾಲಯಗಳು ಅಥವಾ ಡೀಮ್ಡ್ ವಿಶ್ವವಿದ್ಯಾಲಯಗಳು ಈ ಯೋಜನೆಗೆ ಒಳಪಟ್ಟಿರುತ್ತವೆಯೇ; (ವಿವರಗಳನ್ನು ನೀಡುವುದು): | ಈ ಯೋಜನೆ ಅಡಿಯಲ್ಲಿ ಉನ್ನತ ಶಿಕ್ಷಣ ಇಲಾಖೆಯ 30 ವಿಶ್ವವಿದ್ಯಾಲಯಗಳು, 3375 ಕಾಲೇಜುಗಳು ಮತ್ತು 12 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಒಳಪಟ್ಟಿರುತ್ತಾರೆ.<br><br>ಖಾಸಗಿ ವಿಶ್ವವಿದ್ಯಾಲಯಗಳು ಅಥವಾ Deemed to be ವಿಶ್ವವಿದ್ಯಾಲಯಗಳು ಈ ಯೋಜನೆಗೆ ಒಳಪಟ್ಟಿರುವುದಿಲ್ಲ.<br><br>ಸರ್ಕಾರದ 2025-26ನೇ ಸಾಲಿನ ಆಯವ್ಯಯ ಘೋಷಣೆಯಂತೆ UUCMS 2.0 ಅಭಿವೃದ್ಧಿಪಡಿಸಲು ಕ್ರಮಕೈಗೊಳ್ಳಲಾಗಿದ್ದು, ಸದರಿ ಅನುಷ್ಠಾನದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳು, Deemed to be ವಿಶ್ವವಿದ್ಯಾಲಯಗಳು ಮತ್ತು ಇತರೆ ಇಲಾಖೆಗಳಡಿಯಲ್ಲಿರುವ ಸಾರ್ವಜನಿಕ ವಿಶ್ವವಿದ್ಯಾಲಯಗಳಿಗೂ ಅಳವಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |

-3

| | | |
|---|---|---|
| **(ಉ)** | ಈ ಯೋಜನೆಯ ಮೂಲಕ ವಿಶ್ವವಿದ್ಯಾಲಯಗಳಲ್ಲಿ ಏಕವ್ಯವಸ್ಥೆಯ ಜಾರಿಗೆ ಸರ್ಕಾರ ಇಲ್ಲಿಯವರೆಗೆ ಕೈಗೊಂಡಿರುವ ಕ್ರಮಗಳೇನು ಮತ್ತು ಜಾರಿಗೊಂಡಿರುವ ಯೋಜನೆಗಳು ಎಷ್ಟು? (ಪೂರ್ಣ ವಿವರವನ್ನು ಒದಗಿಸುವುದು): | ಇಲ್ಲಿಯವರೆಗೂ ಪ್ರಸ್ತುತ UUCMS ಯೋಜನೆಯನ್ನು ರಾಜ್ಯದ 30 ಸಾರ್ವಜನಿಕ ವಿಶ್ವವಿದ್ಯಾಲಯಗಳು ಮತ್ತು ಅವುಗಳ ಸಂಯೋಜಿತ ಕಾಲೇಜುಗಳಲ್ಲಿ, Affiliation, Admission, Academics and Class Monitoring, Examination, Research and Development, Asset Management, Finance, Student Support ಮಾಡ್ಯೂಲ್‌ಗಳನ್ನು ಅನುಷ್ಠಾನಗೊಳಿಸಲಾಗಿದೆ.<br><br>UUCMS ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ವಿಶ್ವವಿದ್ಯಾಲಯಗಳ ಇ-ಆಡಳಿತ ಘಟಕಗಳೊಂದಿಗೆ ಸಮನ್ವಯತೆ ಸಾಧಿಸಲು ರಾಜ್ಯ ಮಟ್ಟದಲ್ಲಿ UUCMS ರಾಜ್ಯಯೋಜನಾ ನಿರ್ವಹಣಾ ಘಟಕವು ಕಾರ್ಯ ನಿರ್ವಹಿಸುತ್ತಿದೆ.<br><br>ಬಳಕೆದಾರರ ದಿನವಹಿ UUCMS ಅಹವಾಲುಗಳನ್ನು ಪರಿಹರಿಸಲು ticketing tool ಅನ್ನು ಜಾರಿಗೊಳಿಸಲಾಗಿದ್ದು, ಪೂರಕವಾಗಿ UUCMS ಸಹಾಯವಾಣಿಯನ್ನು ಸ್ಥಾಪಿಸಲಾಗಿದೆ. |

**ಸಂಖ್ಯೆ: ಇಡಿ/129 /ಯುಆರ್‌ಸಿ/2026**

**(ಡಾ|| ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಸಚಿವರು